ಅತಿವೃಷ್ಟಿಯಿಂದ ದ.ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಉಂಟಾದ ಹಾನಿ.

2776: (3831)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಬಾರಿಯ ಅತಿವೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆದ ಕೃಷಿ ಹಾನಿ ಎಷ್ಟು?

ಆ) ಸರ್ಕಾರ ಕೃಷಿ ಹಾನಿ ಪರಿಹಾರಕ್ಕಾಗಿ ಎಷ್ಟು ಮೊಬಲಗು ಬಿಡುಗಡೆಗೊಳಿಸಿದೆ?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಈ ಬಾರಿ ಅತಿ ವೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ 5 ತಾಲ್ಲೂಕುಗಳಲ್ಲಿ 793.27 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ಹಾನಿಗೊಂಡಿದ್ದು, ರೂ.400 ಲಕ್ಷಗಳ ನಷ್ಟ ಉಂಟಾಗಿರುವುದಾಗಿ ಅಂದಾಜಿಸಲಾಗಿದೆ.

ಆ) 1998-99ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಒಟ್ಟು ರೂ.254.50 ಲಕ್ಷಗಳ ಅನುದಾನವನ್ನು ಕೃಷಿ ಬೆಳೆ ಹಾನಿಯೂ ಒಳಗೊಂಡಂತೆ ಖಾಸಗಿ ಆಸ್ತಿಗಳ ನಷ್ಟಕ್ಕೆ ಪರಿಹಾರ ನೀಡಲು ಹಾಗೂ ಸಾರ್ವಜನಿಕ ಆಸ್ತಿಗಳ ತುರ್ತು ದುರಸ್ತಿ ಮಾಡಲು ಸರ್ಕಾರವು ಬಿಡುಗಡೆ ಮಾಡಿದೆ.

ಕೊಡಗು ಜಿಲ್ಲೆಯ ಭೂ ಮಾಪನ ಕಾರ್ಯ.

2778 (3805)

ಶ್ರೀ ಡಿ.ಎನ್.ಮಾದಪ್ಪ (ಮಡಿಕೇರಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕೊಡಗು ಜಿಲ್ಲೆಯ ಪುನರ್ ಭೂಮಾಪನ (ರೀಸರ್ವೆ) ಕಾರ್ಯ ಯಾವ ಹಂತದಲ್ಲಿದೆ. ಈ ಕಾರ್ಯಕ್ಕೆ ಸರ್ಕಾರ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ;

ಆ) ಪುನರ್ ಭೂಮಾಪನ ಕಾರ್ಯಕ್ಕೆ ಎಷ್ಟು ಹಣ ಖರ್ಚಾಗಿದೆ; ಈ ಕಾರ್ಯ ಸ್ಥಗಿತಗೊಳ್ಳಲು ಕಾರಣಗಳೇನು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):